# SCCH-04

**ಸಾಕ್ಷಿಯನ್ನು ದಿನಾಂಕಃ 05.04.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು** ಕುಮಾರಿ ಮೋನಿಕಾ 1 ನೇ ಎದುರುದಾರರ ಪರ ವಕೀಲರಿಂದಃ-

ಕಲಂ 65 ಬಿ ಅಡಿಯಲ್ಲ್ ಸಲ್ಲಿಸಿರುವ ಅರ್ಜಿಯ ಮಾಹಿತಿ ನನಗೆ ಗೊತ್ತಿಲ್ಲ. ನಿಪಿ 6 ರ ಡಿಸ್ ಚಾರ್ಜ್ ಸಮ್ಮರಿ ಪ್ರಕಾರ ದಿನಾಂಕಃ16.03.2023 ರ ನಂತರ ಮುಂದುವರೆದ ಚಿಕಿತ್ಸೆಗೆ ಅಸಲು ಅರ್ಜಿದಾರರಾದ ನನ್ನ ಪತಿಯನ್ನು ಆಸ್ಪತ್ರೆಗೆ ಪುನಃ ದಾಖಲಿಸಲಾಗಿತ್ತು. ಸದರಿ ಬಾಬ್ತು ಮಾನ್ಯ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಿನಾಂಕಃ16.03.2023 ರಂದು ಸದರಿ ನನ್ನ ಪತಿಗೆ ಚಿಕಿತ್ಸೆಗೆ ನಮ್ಮ ನಿರ್ಲಕ್ಷತನದಿಂದ ಆದ ವೈಫಲ್ಯಕ್ಕೆ ಮುಂದುವರೆದ ಚಿಕಿತ್ಸೆಯನ್ನು ಕೊಡಿಸಲಾಗಿದೆ ಎಂದರೆ ಸರಿಯಲ್ಲ. ಅಸಲು ಅರ್ಜಿದಾರರಾದ ನನ್ನ ಪತಿಯ ಅಸಮರ್ಥದಿಂದ ಸದರಿಯವರು ಕೆಲಸ ಮಾಡುತ್ತಿದ್ದ ಕಂಪನಿಯವರು ನನ್ನ ಪತಿಯನ್ನು ಕೆಲಸದಿಂದ ಹೊರ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತದ ಹಿನ್ನೆಲೆಯಲ್ಲಿ ಅಸಲು ಅರ್ಜಿದಾರರಾದ ನನ್ನ ಪತಿಯು ತಮ್ಮ ಸಾಮರ್ಥವನ್ನು ಕಳೆದುಕೊಂಡ ಕಾರಣ ಸದರಿ ಕಂಪನಿಯವರು 8 ತಿಂಗಳ ಕಾಲ ನನ್ನ ಪತಿಯ ಉದ್ಯೋಗಕ್ಕಾಗಿ ಅವಕಾಶವನ್ನು ನೀಡಿ ಗುಣಮುಖರಾಗದ ಕಾರಣ ನನ್ನ ಪತಿಯನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಬಾಬ್ತು ಮಾನ್ಯ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ರಸ್ತುತ ಕ್ಲೆಮ್ ಅರ್ಜಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ದಾಖಲಿಸುವ ದಿನದಂದು ಮಾನ್ಯ ನ್ಯಾಯಾಲಯಕ್ಕೆ ಯಾವುದೇ mentally unstable ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 11 ಮತ್ತು 12 ರ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u> <u>ಶ್ರೀ ವಿ ಡಿ ಜೆ 3</u>** ನೇ ಎದುರುದಾರರ ಪರ ವಕೀಲರಿಂದಃ-

ಅಪಘಾತದ ಸಮಯದಲ್ಲಿ ನನ್ನ ಪತಿಯೊಂದಿಗೆ ಬೇರೆ ಯಾರು ಇರಲಿಲ್ಲ. ಘಟನಾ ರಸ್ತೆಯು ಹೈವೆ ರಸ್ತೆ ಎಂದರೆ ಸರಿ. ಅಪಘಾತವು ಬೆಳಗಿನ ಸಮಯ ಆದಕಾರಣ ವಾಹನಗಳ ಸಂಚಾರ ದಟ್ಟವಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ವಿಚಾರವನ್ನು ಟ್ರಾಫಿಕ್ ಪೊಲೀಸ್ ತಿಳಿಸಿರುತ್ತಾರೆ. ಅಪಘಾತವನ್ನು ಎದುರುದಾರರ ವಾಹನ ಮಾಡಿರುತ್ತದೆ ಎಂದು ಪೊಲೀಸರು ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತದ ನಂತರ ನಾನು ಘಟನಾ ಸ್ಥಳವನ್ನು ನೋಡಿರುವುದಿಲ್ಲ. ದೂರನ್ನು ಶರವಣ ರವರು ನೀಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಶರವಣ ರವರು ನನಗೆ ಪರಿಚಯವಿರುವುದಿಲ್ಲ. ಪೊಲೀಸ್ ದಾಖಲೆಗಳ ಪ್ರಕಾರ ನನ್ನ ಪತಿಯು ರಸ್ತೆಯನ್ನು ದಾಟುತ್ತಿದ್ದರು ಎಂದು ನಮೂದು ಇದೆ ಎಂದರೆ ಸರಿ. ಘಟನಾ ರಸ್ತೆಯಲ್ಲಿ ಪಾದಚಾರಿಗಳು ದಾಟಲು ಸ್ಥಳವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರ ಕರುಡು ನಕ್ಷೆಯ ಪ್ರಕಾರ ಅಪಘಾತವು ರಸ್ತೆಯ ಮಧ್ಯದಲ್ಲಿ ಸಂಭವಿಸಿದೆ ಎಂದರೆ ನನಗೆ ಗೊತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಯಾದ ಕಾರಣ ಘಟನಾ ರಸ್ತೆಯಲ್ಲಿ ದಟ್ಟನೆ ವಾಹನ ಸಂಚಾರ ಇರುತ್ತದೆ ಎಂದು ಸೂಚಿಸಿದರೆ ಸಾಕ್ಷಿಯು ಸರ್ವಿಸ್ ರಸ್ತೆಯಲ್ಲಿ ಅಪಘಾತವಾಗಿದೆ ಎಂದು ಉತ್ತರಿಸುತ್ತ್ರಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸ್ ದಾಖಲೆಯಲ್ಲಿ ನನ್ನ ಪತಿಯು ಸರ್ವಿಸ್ ರಸ್ತೆಯನ್ನು ದಾಟುತ್ತಿದ್ದರು ಎಂದು ಎಲ್ಲಿಯೂ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ರಸ್ತೆಯಲ್ಲಿ ಜಿಬ್ರಾ ಕ್ರಾಸ್ ಇರದ ಕಾರಣ ಅಪಘಾತವು ನನ್ನ ಪತಿಯ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಪತಿಯು ರಸ್ತೆಯ ವಾಹನ ಸಂಚಾರವನ್ನು ಗಮನಿಸಿ ರಸ್ತೆ ದಾಟಿದ್ದಲ್ಲಿ ಅಪಘಾತ ಸಂಭವಿಸುತ್ತಿರಲಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ನನ್ನ ಪತಿಯು ರಸ್ತೆಯನ್ನು ನೋಡಿಕೊಂಡು ದಾಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಅಪಘಾತವು ನನ್ನ ಪತಿಯ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾದ ಕೂಡಲೇ

ನನ್ನ ಪತಿಯನ್ನು ಅಶ್ವಥ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಆದರೆ ಒಳರೋಗಿಯಾಗಿ ಚಿಕಿತ್ಸೆಯನ್ನು ಕೊಡಿಸಿರುವುದಿಲ್ಲ. ಅಪಘಾತದ ವಿಚಾರವನ್ನು ಆಸ್ಪತ್ರೆಯಲ್ಲಿ ತಿಳಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ಪತ್ರೆಯಲ್ಲಿ ಮಾಡಿರುವ ಎಂ ಎಲ್ ಸಿ ಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**18** ನೇ **ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**